# ಜಾಗೃತ ಮಹಿಳಾ ಒಕ್ಕೂಟ



ಗೋಲ್ಯಾನಟ್ಟಿ, ಖಾನಾಪುರ ತಾಲೂಕ, ಬೆಳಗಾಂವ ಜಿಲ್ಲಾ

ಸಂಪರ್ಕ: 9900118759

## ತಾಯ್ತನ ಸಂರಕ್ಷಣಾ ಅಭಿಯಾನಕ್ಕೆ ಬನ್ನಿ

**ಸೋಮವಾರ, 20/8/2018, 10 ಘಂಟೆಗೆ,**

**ಜಾಥಾ: ಬೆಳಗಾಂವ ಅಂಬೇಡ್ಕರ ಗಾರ್ಡನ್ – ಡಿ ಸಿ ಕಚೇರಿಗೆ.**

**ನಂತರ 'ಕನ್ನಡ ಸಾಹಿತ್ಯ ಭವನದಲ್ಲಿ' (ಕೊಟಡಿ ನಂಬರ್ 2)**

**ಮುಕ್ತ ಚರ್ಚೆ ಹಾಗೂ ವಿಚಾರ ಮಂಡನೆ**

ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ತಾಯಿ ಮರಣ ಸಂಭವಿಸುವುದು ಕರ್ನಾಟಕದಲ್ಲಿ. ಒಂದು ಲಕ್ಷ ಹೆರಿಗೆಯಲ್ಲಿ 133 ತಾಯಂದಿರು ಸಾವಿಗೀಡಾಗುತ್ತಾರೆ ಎಂಬುದು ಕಂಡು ಬಂದಿದೆ. ತಾಯಿ ಮರಣಕ್ಕಿರುವ ಅನೇಕ ಕಾರಣಗಳಲ್ಲಿ ಬಡತನದಿಂದಾಗಿ ಆರೋಗ್ಯ ಸೇವೆಯನ್ನು ಪಡೆಯಲು ಸಾಧ್ಯವಾಗದಿರುವುದೂ ಒಂದು. ಅಧ್ಯಯನವೊಂದರಿಂದ, ಹೆರಿಗೆಯ ಮೇಲಾಗುವ ಖರ್ಚು, ಶೇ. 46.6 ರಷ್ಟು ಮಹಿಳೆಯರನ್ನು ಬಡತನ ರೇಖೆಯ ಕೆಳಗೆ ದೂಡುತ್ತದೆ ಎಂಬುದು ತಿಳಿದು ಬಂದಿದೆ.

ಈ ಹಿನ್ನೆಲೆಯಲ್ಲಿ "ಜಾಗೃತ ಮಹಿಳಾ ಒಕ್ಕೂಟವು" ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ಮತ್ತು ಹುಕ್ಕೇರಿ ತಾಲೂಕುಗಳಲ್ಲಿ ಸಮೀಕ್ಷೆಯೊಂದನ್ನು ಕೈಗೊಂಡಿತ್ತು. ಜಿಲ್ಲೆಯ 29 ಹಳ್ಳಿಗಳ (ಖಾನಾಪುರ 25, ಬೆಳಗಾವಿ 2, ಹುಕ್ಕೇರಿ 2), 248 ತಾಯಂದಿರನ್ನು (ಖಾನಾಪುರ 175, ಬೆಳಗಾವಿ 32, ಹುಕ್ಕೇರಿ 41) ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಸಮೀಕ್ಷೆಯಲ್ಲಿ ದೊರೆತಿರುವ ಮಾಹಿತಿ ಮೇಲ್ಕಾಣಿಸಿದ ಅಂಕಿ ಅಂಶಗಳನ್ನು ಸಮರ್ಥಿಸುವಂತಿದೆ.

ಸರಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡ ಮಹಿಳೆಯರ ಹೇಳಿಕೆಯ ಪ್ರಕಾರ ಬರೀ ಲಂಚ ರೂಪದಲ್ಲಿ ಒಂದು ಹೆರಿಗೆಗೆ ರೂ. 531/– ತೆರಬೇಕಾಗಿದೆ. ಉಚಿತವಾಗಿ ಆರೋಗ್ಯ ಸೇವೆಯನ್ನು ಪಡೆಯ ಬೇಕಾದ ಸರಕಾರಿ ಆಸ್ಪತ್ರೆಯಲ್ಲಿ ವಿವಿಧ ಸೇವೆಗಳಿಗೂ ಖರ್ಚಾದುದು ಕಂಡು ಬಂದಿದೆ. ಗರ್ಭಿಣಿಯಾಗಿದ್ದಾಗ ಸ್ಕ್ಯಾನಿಂಗ್ ಮಾಡಿಸಿದರೆ ಒಂದು ಸ್ಕ್ಯಾನಿಂಗಿಗೆ ರೂ. 188 ರಷ್ಟು ಖರ್ಚು, ಕಬ್ಬಿಣಾಂಶದ ಮಾತ್ರೆಗಳಿಗಾಗಿ ರೂ. 709/–, ಅಂಬುಲನ್ಸ್‌ಗಾಗಿ ರೂ. 560/–, ನಾರ್ಮಲ್ ಹೆರಿಗೆಯಾದರೆ, ರೂ. 258/–, ಸಿಝೇರಿಯನ್ ಆದರೆ ರೂ. 1870/–. ಎಲ್ಲಿ ಎಲ್ಲ ಸೇವೆಗಳೂ ಉಚಿತವಾಗಿ ಸಿಗಬೇಕಿತ್ತೋ ಅಲ್ಲಿ ಒಂದು ಹೆರಿಗೆಗಾಗಿ ಒಬ್ಬ ಮಹಿಳೆ, ನಾರ್ಮಲ್ ಆದರೆ ರೂ. 2246/–, ಮತ್ತು ಸಿಝೇರಿಯನ್ ಹೆರಿಗೆಯಾದರೆ ರೂ.4234/– ಖರ್ಚು ಮಾಡುತ್ತಾಳೆ. ಜೊತೆಗೆ ನವಜಾತ ಶಿಶುವಿಗೆ ಆರೋಗ್ಯ ಸಮಸ್ಯೆಯಾದಲ್ಲಿ ಆ ಖರ್ಚು ಬೇರೆ. ಸಮೀಕ್ಷೆಯಲ್ಲಿ ತಿಳಿದುಬಂದ ಪ್ರಕಾರ ಹುಟ್ಟಿದ 10 ಮಕ್ಕಳಲ್ಲಿ ಮೂರು ಮಕ್ಕಳಿಗಾದರೂ ಆರೋಗ್ಯ ಸಮಸ್ಯೆ ಬರುತ್ತದೆ. ಒಂದೊಂದು ಮಗುವಿನ ಮೇಲೂ ಅಂದಾಜು 3000 ರೂಪಾಯಿ ಖರ್ಚು ಬಂದಿದೆ. ಸಮೀಕ್ಷೆಯಲ್ಲಿ ಮಹಿಳೆಯರು ನೀಡಿದ ಮಾಹಿತಿಯ ಪ್ರಕಾರ, ಸರಕಾರಿ ಆಸ್ಪತ್ರೆಯ ವೈದ್ಯರು ಸ್ಕ್ಯಾನಿಂಗ್‌ನ್ನು ಖಾಸಗಿಯಲ್ಲಿ ಮಾಡಿಸಲು ಹೇಳುತ್ತಾರೆ. ಕಬ್ಬಿಣಾಂಶದ ಮಾತ್ರೆಗಳನ್ನು ಹೊರಗಡೆಯಿಂದ ಖರೀದಿಸಲು ಚೀಟಿ ಬರೆದು ಕೊಡುತ್ತಾರೆ. ನವಜಾತ ಶಿಶುವಿಗೆ

ಆರೋಗ್ಯ ಸಮಸ್ಯೆಯಾದರೆ ಖಾಸಗಿ ಆಸ್ಪತ್ರೆಗೆ ಹೋಗಲು ಹೇಳುತ್ತಾರೆ. ಹೇಗೋ ಕೂಲಿ ಮಾಡಿಕೊಂಡು ಕಷ್ಟ ಪಟ್ಟು ಎರಡು ಹೊತ್ತಿನ ಊಟ ಮಾಡಿಕೊಂಡಿರುವ ಬಡವರು ಹೆರಿಗೆಯ ಸಮಯದಲ್ಲಿ ಅಷ್ಟು ದಿನದ ದುಡಿಮೆಯನ್ನು ಕಳೆದುಕೊಳ್ಳುವುದಲ್ಲದೆ ಆಸ್ಪತ್ರೆಗಾಗಿಯೂ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ.

ಇನ್ನು ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಯಾದವರು ಮಾಡಿದ ಖರ್ಚು ಮತ್ತೂ ಹೆಚ್ಚು. ಇಲ್ಲಿ ನಾರ್ಮಲ್ ಹೆರಿಗೆಗೆ ರೂ. 3716/- ಖರ್ಚಾದರೆ ಸಿಸೇರಿಯನ್ ಹೆರಿಗೆಗೆ ರೂ.17,670/–! ಇವರೇನು ಹಣವಂತರೆಂದು ಖಾಸಗಿ ಆಸ್ಪತ್ರೆಗೆ ಹೋದವರಲ್ಲ. ಸರಕಾರಿ ದವಾಖಾನೆಯ ವೈದ್ಯರೇ ಖಾಸಗಿಯಲ್ಲಿ ಹೆರಿಗೆ ಮಡಿಸಿಕೊಳ್ಳಲು ಶಿಫಾರಸ್ಸು ಮಾಡಿದ್ದಕ್ಕೆ ತಾವು ಹೋದುದಾಗಿ ಹೇಳುತ್ತಾರೆ.

ಸಮೀಕ್ಷೆಗೊಳಪಟ್ಟ ಕುಟುಂಬವೊಂದಕ್ಕೆ ವಾಸಿಸಲು ಸರಿಯಾದ ಮನೆಯೂ ಇರಲಿಲ್ಲ. ಮುರುಕು ಝೋಪಡಿಯಲ್ಲಿ ವಾಸವಿದ್ದ ಆ ಕುಟುಂಬದ ಬಾಣಂತಿಗೆ ಪಕ್ಕದಲ್ಲೇ ಒಂದು ತಟ್ಟಿ ಕಟ್ಟಿ ವ್ಯವಸ್ಥೆ ಮಾಡಾಲಾಗಿತ್ತು. ಶಿಶು ಮತ್ತು ಬಾಣಂತಿಯನ್ನು ಬೆಚ್ಚಗಿಡಲು ಅಲ್ಲಿ ಯಾವ ಸೌಲಭ್ಯವೂ ಇರಲಿಲ್ಲ. ಮಳೆಯಿಂದಾಗಿ ನೆಲ ಒದ್ದೆಯಾಗಿತ್ತು. ಬಾಣಂತಿಗಾಗಿ ಒಂದು ಮಂಚವನ್ನು ತರುವಷ್ಟು ಕೂಡ ಆ ಕುಟುಂಬಕ್ಕೆ ಸಾಧ್ಯವಿರಲಿಲ್ಲ. ಇಂಥವರಿಗೆ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯಿಂದ ಸ್ವಲ್ಪವಾದರೂ ಪ್ರಯೋಜನವಾಗುತ್ತಿತ್ತೋ ಏನೋ. ಇದು ಮೊದಲ ಹೆರಿಗೆಗೆ ಸಿಗುವಂಥ ಆರ್ಥಿಕ ಸಹಾಯ. ಆದರೆ 75 ಪ್ರಥಮ ಹೆರಿಗೆ ಆದ ಮಹಿಳೆಯರಲ್ಲಿ ಕೇವಲ 11 ಜನಕ್ಕೆ ಮಾತೃವಂದನಾ ಯೋಜನೆಯಡಿಯಲ್ಲಿ ಸಿಗಬೇಕಾದ ಧನಸಹಾಯದ ಅರ್ಧದಷ್ಟು ಮಾತ್ರ ಸಿಕ್ಕಿದೆ.

ಖಾನಾಪುರ ತಾಲೂಕಿನಲ್ಲಿ ಸಮೀಕ್ಷೆ ಮಾಡಿದ 175 ಕುಟುಂಬಗಳಲ್ಲಿ 20 ಕುಟುಂಬಗಳು ಹೆರಿಗೆಗಾಗಿ ಮಾಡಿದ ಖರ್ಚಿನಿಂದಾಗಿ ಬಡತನ ರೇಖೆಯ ಕೆಳಗಡೆ ಬಂದಂದ್ದು ಕಂಡು ಬಂದಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಹೆರಿಗೆಯ ಸಂದರ್ಭದಲ್ಲಿ, 10 ರಲ್ಲಿ ಕನಿಷ್ಟ ಒಬ್ಬರಾದರೂ ಬಡತನ ರೇಖೆಯ ಕೆಳಗೆ ಬರುತ್ತಾರೆ.

ಸರಕಾರಿ ಆಸ್ಪತ್ರೆಯಲ್ಲಿ ಎಲ್ಲವೂ ಉಚಿತವೆಂದು ಹೇಳಲಾಗುತ್ತದೆ. ತಾಯಂದಿರಿಗಾಗಿ ಆಕರ್ಷಕ ಯೋಜನೆಗಳನ್ನು ಘೋಷಿಸಲಾಗುತ್ತದೆ. ಆದರೆ ಬಡವರು ಈ ಸೌಲಭ್ಯಗಳಿಂದ ವಂಚಿತರಾಗೇ ಉಳಿಯುತ್ತಿದ್ದಾರೆ. ಇದು ಸರಿಯಾಗುವುದು ಹೇಗೆ? ವ್ಯವಸ್ಥೆಯನ್ನು ಸರಿಪಡಿಸಲು ಪ್ರತಿ ತಾಲೂಕು ಆಸ್ಪತ್ರೆಗಳಲ್ಲಿ ಬದಲಾವಣೆಗಳನ್ನು ತರಬೇಕಿದೆ.

ತಾಯ್ತನ ಸಂರಕ್ಷಣೆಯ ಸಂದರ್ಭದಲ್ಲಿ ನಮ್ಮ ಬೇಡಿಕೆಗಳು ಈ ಕೆಳಗಿನಂತಿವೆ.

೧. ಖಾನಾಪುರ ತಾಲೂಕಿನಲ್ಲಿ ಕನಿಷ್ಟ 10 ಅಲ್ಟ್ರಾಸೌಂಡ್ ಮಶೀನುಗಳು ಇರಬೇಕು. ಪ್ರತಿ ಮಶೀನನ್ನು ನಡೆಸಲು ತರಬೇತಿ ಪಡೆದ ಸಿಬ್ಬಂದಿ ಇರಬೇಕು.
೨. ಖಾನಾಪುರದಿಂದ ತಾಲುಕ ಸರ್ಕಾರಿ ಆಸ್ಪತ್ರೆ ಸುತ್ತು ಮುತ್ತು 2 ಕಿ.ಮೀ ಅಂತರದಲ್ಲಿರುವ ಎಲ್ಲ ಖಾಸಗಿ ಅಲ್ಟ್ರಾಸೌಂಡ್ ಘಟಕಗಳನ್ನು ಹಾಗು ಖಾಸಗಿ ಆಸ್ಪತ್ರೆಗಳನ್ನು ರದ್ದುಗೊಳಿಸಬೇಕು/ ಸ್ಥಳಾಂತರಿಸಬೇಕು.
೩. ಅಂಬುಲನ್ಸ್ ಸೇವೆ ನೀಡಿದ್ದಕ್ಕಾಗಿ ಹಣ ಪಡೆಯಕೂಡದೆಂದು ಅಂಬುಲನ್ಸ್ ಚಾಲಕರಿಗೆ ಎಚ್ಚರಿಕೆ ಕೊಡಬೇಕು ಹಾಗು ಇದರ ಬಗ್ಗೆ ಆಸ್ಪತ್ರೆಯ ಆವರಣದಲ್ಲಿ ನೋಟಿಸ್ ಹಾಕಬೇಕು.
೪. ಖಾನಾಪುರ ತಾಲೂಕು ಆಸ್ಪತ್ರೆಯಲ್ಲಿ ಇಬ್ಬರು ಸ್ತ್ರೀ ರೋಗ ತಜ್ಞರು ಹಾಗೂ ಇಬ್ಬರು ಅರೆವಳಿಕಾ ತಜ್ಞರು ಪೂರ್ಣಾವಧಿ ಸಿಬ್ಬಂದಿಯಾಗಿ ನೇಮಕಗೊಳ್ಳಬೇಕು
೫. ಎಲ್ಲ ಗರ್ಭಿಣಿ ಸ್ತ್ರೀಯರಿಗೆ ಕಬ್ಬಿಣಾಂಶದ ಮಾತ್ರೆಯ ಅವಶ್ಯಕತೆ ಕುರಿತು ಜಾಗೃತಿ ಮೂಡಿಸಬೇಕು.

**!!!!ಎಲ್ಲರೂ ಬನ್ನಿರಿ!!!! !!!!ನಮ್ಮ ತಾಯಂದಿರನ್ನು ಉಳಿಸೋಣ!!!!**